ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಕನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521**
ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009

**ಕವಿಪ್ರನಿನಿ/ಬಿ99/3677/2019-2020** **ದಿನಾಂಕ: 07 JUN 2019**

## ಸುತ್ತೋಲೆ

**ವಿಷಯ:** ಸ್ಥಿರಾಸ್ತಿಗಳನ್ನು ಖರೀದಿ ಹಾಗೂ ಮಾರಾಟ ಮಾಡುವ ಮುನ್ನ ನಿಗಮದ ಪೂರ್ವಾನುಮತಿ ಪಡೆಯುವ ಬಗ್ಗೆ.

**ಉಲ್ಲೇಖ:**
1. ಮಂಡಳ ಆದೇಶ ಸಂಖ್ಯೆ: ಕವಿಮಂ/ಬಿ3(ಎ)/6454/95-96, ದಿನಾಂಕ: 24/10/1997
2. ಪ್ರ.ಇಂ(ವಿ) ರವರ ಸುತ್ತೋಲೆ ಸಂಖ್ಯೆ: ಲೆಅ(ಸು):ಸ4:ಎ372:ಸಿವೈಎಸ್ ದಿನಾಂಕ: 08/12/2000.
3. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ4/4634/01-02 ದಿನಾಂಕ: 01.10.2001.
4. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ4/5626/02-03/ ದಿನಾಂಕ: 29.07.2002.
5. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ55/5233/2005-06 ದಿನಾಂಕ: 05.09.2007
6. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ34/40218/2013-14 ದಿನಾಂಕ: 13.01.2014.

ಕ.ವಿ.ಮಂ. ನೌಕರರ ಸೇವೆಗಳು (ನಡತೆ) ನಿಬಂಧನೆಗಳು, 1988, ರ ನಿಬಂಧನೆ 23(2)ಯ ಪ್ರಕಾರ ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರರು ತಮ್ಮ ಹೆಸರಿನಲ್ಲಾಗಲಿ ಅಥವಾ ತಮ್ಮ ಕುಟುಂಬದ ಸದ್ಯಸರ ಹೆಸರಿನಲ್ಲಾಗಲಿ, ಸ್ಥಿರಾಸ್ತಿಗಳನ್ನು ಖರೀದಿ ಹಾಗೂ ಮಾರಾಟ ಮಾಡುವ ಮೊದಲು ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಗಳಿಂದ ನಿಗಮದ ಪೂರ್ವಾನುಮತಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ, ಸ್ಥಿರಾಸ್ತಿಗಳನ್ನು ಖರೀದಿ ಅಥವಾ ಮಾರಾಟ ಮಾಡಲು ನಿಗಮದ ಪೂರ್ವಾನುಮತಿಯನ್ನು ಪಡೆಯಲು ಸಲ್ಲಿಸುತ್ತಿರುವ ಮನವಿ ಪತ್ರಗಳು ಹಾಗೂ ಅರ್ಜಿಗಳು ಅಪೂರ್ಣವಾಗಿದ್ದು, ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ಹಾಗೂ ಮೇಲಾಧಿಕಾರಿಗಳು, ಅಧಿಕಾರಿ/ನೌಕರರು ಸಲ್ಲಿಸುವ ಅರ್ಜಿಗಳ ಪರಿಪೂರ್ಣತೆಯನ್ನು ಕೂಲಂಕುಷವಾಗಿ ಪರಿಶೀಲಿಸದೇ, ಅರ್ಜಿಗಳನ್ನು ಸಲ್ಲಿಸುತ್ತಿದ್ದು ನಿಗಮದಿಂದ ಅನುಮತಿ/ನಿರಾಕ್ಷೇಪಣಾ ಪತ್ರವನ್ನು ನೀಡಲು ಕಷ್ಟಸಾದ್ಯವಾಗಿರುತ್ತದೆ.

ಆದ್ದರಿಂದ, ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರು ಸ್ಥಿರಾಸ್ತಿಗಳನ್ನು ಖರೀದಿಸಲು ಹಾಗೂ ಮಾರಾಟ ಮಾಡಲು ನಿಗಮದ ಪೂರ್ವಾನುಮತಿಯನ್ನು ಪಡೆಯಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅರ್ಜಿಗಳನ್ನು ಸಲ್ಲಿಸಲು ಸೂಚಿಸಿದೆ:

1. ನಿವೇಶನ/ ಕೃಷಿ ಭೂಮಿ/ ಮನೆ/ ಫ್ಲಾಟ್ (Flat) ಖರೀದಿಗೆ ಮತ್ತು ಗೃಹ ನಿರ್ಮಾಣಕ್ಕೆ ಸಂಬಂಧಪಟ್ಟ ದಾಖಲೆ ಪತ್ರಗಳ ಜೆರಾಕ್ಸ್‌ನ ಎಲ್ಲಾ ಪ್ರತಿಗಳನ್ನು ಮೇಲಾಧಿಕಾರಿಗಳ ಅಥವಾ ನೋಟರಿಯವರಿಂದ ದೃಢೀಕರಿಸಿರಬೇಕು.
2. ಅಧಿಕಾರಿ/ನೌಕರರು, ನಿವೇಶನ/ಮನೆ/ಫ್ಲಾಟ್/ಕೃಷಿ ಭೂಮಿ ಖರೀದಿಗೆ ಮತ್ತು ಗೃಹ ನಿರ್ಮಾಣ/ಗೃಹ ವಿಸ್ತರಣೆ ಹಾಗೂ ದುರಸ್ತಿ ಮಾಡಲು ಒಟ್ಟು ವೆಚ್ಚವನ್ನು ಭರಿಸಲು ಆದಾಯದ ಮೂಲಗಳ ವಿವರಣಾ ಪಟ್ಟಿಯನ್ನು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಬೇಕು.
3. ಈ ಮೊದಲು ನಿವೇಶನ ಖರೀದಿ ಮಾಡಿದ್ದು, ಈಗ ನಿರ್ಮಾಣಕ್ಕಾಗಿ ಅಥವಾ ದುರಸ್ಥಿಗಾಗಿ ಅನುಮತಿ ಕೋರಿದ್ದಲ್ಲಿ, ನಿವೇಶನ ಖರೀದಿಗೆ ಈ ಹಿಂದೆ ಅನುಮತಿ ಪಡೆದಿರುವ ನಿರಾಕ್ಷೇಪಣಾ ಪತ್ರದ/ ಅನುಮತಿ ಪತ್ರದ ಪ್ರತಿಯನ್ನು ನೀಡತಕ್ಕದ್ದು
4. ಸಾಲ ನೀಡಲಿರುವ ಹಣಕಾಸು ಸಂಸ್ಥೆಯಿಂದ ಸಾಲದ ಮಂಜೂರಾತಿ ಪತ್ರ ಸಲ್ಲಿಸಬೇಕು.

5. ನಿವೇಶನ / ಮನೆ / ಕೃಷಿ ಭೂಮಿ / ಫ್ಲಾಟ್ ಖರೀದಿಸುವಾಗ ಕ್ರಯ ಪತ್ರ (Sale Deed)/ ಕರಾರು ಪತ್ರ (Agreement) ಸಲ್ಲಿಸಬೇಕು.
6. ಮನೆ ನಿರ್ಮಾಣ ಮಾಡಲು ಅನುಮತಿಗಾಗಿ ದೃಢೀಕೃತ ಮನೆಯ ನಕ್ಷೆ (Plan) ಮತ್ತು ಅಂದಾಜು ಪಟ್ಟಿ (Estimate) ಸಲ್ಲಿಸಬೇಕು.
7. ಅಧಿಕಾರಿ / ನೌಕರರು ಇತ್ತೀಚಿನ ಸಂಬಳ ದೃಢೀಕೃತ ಪತ್ರ ಸಲ್ಲಿಸಬೇಕು.
8. ನಿವೇಶನ / ಕೃಷಿ ಭೂಮಿ / ಮನೆ / ಫ್ಲಾಟ್ (Flat) ಖರೀದಿಗೆ ಮತ್ತು ಗೃಹ ನಿರ್ಮಾಣ / ಗೃಹ ವಿಸ್ತರಣೆ ಹಾಗೂ ದುರಸ್ತಿಗಾಗಿ ಸಲ್ಲಿಸಿರುವ ಸಂಬಂಧಪಟ್ಟ ದಾಖಲೆ ಪತ್ರಗಳಿಗೆ **ನಿಗಮ / ಕಂಪನಿ ಯಾವುದೇ ರೀತಿಯಲ್ಲಿ ಹೊಣೆಯಾಗಿರುವುದಿಲ್ಲ.**

ಕವಿಪ್ರನಿನಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ನೌಕರರು ಸ್ಥಿರಾಸ್ತಿಗಳನ್ನು ಖರೀದಿಸಲು ಹಾಗೂ ಮಾರಾಟ ಮಾಡಲು ನಿಗಮದ ಪೂರ್ವಾನುಮತಿಯನ್ನು ಪಡೆಯಲು ಸಲ್ಲಿಸುವ ಅರ್ಜಿಗಳೊಂದಿಗೆ ಈ ಸುತ್ತೋಲೆಯ ಅನುಬಂಧಗಳಲ್ಲಿ ತಿಳಿಸಿದ ಎಲ್ಲಾ ಮಾಹಿತಿಗಳನ್ನು ತಪ್ಪದೇ ಭರ್ತಿಮಾಡಿ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಿಗಳಿಗೆ ಸಮುಚಿತ ಮಾರ್ಗ ಮುಖೇನ ಸಲ್ಲಿಸತಕ್ಕದ್ದು.

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ)**
**ಕವಿಪ್ರನಿನಿ**

ಪ್ರತಿಗಳು:

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ/ನಿರ್ದೇಶಕರು (ಹಣಕಾಸು), ಬೆಸ್ಕಾಂ.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂ.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆ. ಮತ್ತು ಮಾ.ಸಂ.)/(ನಿ.ವ್ಯ.) ಮತ್ತು ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಇವರುಗಳ ಆಪ್ತ ಕಾರ್ಯದರ್ಶಿಗಳು, ಬೆಂ.

ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

6. ಎಲ್ಲಾ ಅಧೀಕ್ಷಕ ಇಂಜಿನಿಯರ್ / ಎಲ್ಲಾ ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ಎಸ್ಕಾಂ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಎಲ್ಲಾ ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
8. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ.), ಕವಿಪ್ರನಿನಿ, ಎಸ್ಕಾಂ.
9. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಪ್ರತಿಗಳು ಮಾಹಿತಿಗಾಗಿ:

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ & ನಿರ್ದೇಶಕರು, ಕವಿಪ್ರನಿನಿ/ಬೆಸ್ಕಾಂ/ಮೆಸ್ಕಾಂ/ಹೆಸ್ಕಾಂ/ಗೆಸ್ಕಾಂ/ಚಾವಿಸನಿನಿ, ಬೆಂಗಳೂರು.
2. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.

ಅನುಬಂಧ-1

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

[ಸ್ಥಿರಾಸ್ತಿಗಳ ಖರೀದಿ ಮತ್ತು ಗೃಹ ನಿರ್ಮಾಣಕ್ಕೆ ಪೂರ್ವಾನುಮತಿ
(ನಿರಾಕ್ಷೇಪಣಾ ಪತ್ರ) ಪಡೆಯಲು ಸಲ್ಲಿಸಬೇಕಾದ ಅರ್ಜಿಯ ನಮೂನೆ]

| | | |
|---|---|---|
| 1 | ಅರ್ಜಿದಾರರ ಹೆಸರು, ಪಿನ್: | |
| 2 | ಪದನಾಮ: | |
| 3 | ಕೆಲಸ ಮಾಡುತ್ತಿರುವ ಕಛೇರಿ: | |
| 4 | ಹುಟ್ಟಿದ ದಿನಾಂಕ: | |
| 5 | ಕೆಲಸಕ್ಕೆ ಸೇರಿದ ದಿನಾಂಕ: | |
| 6 | ನಿವೃತ್ತಿ ಹೊಂದುವ ದಿನಾಂಕ: | |
| 7 | ಕಳೆದ 3 ವರ್ಷಗಳಲ್ಲಿ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯನ್ನು ಸಲ್ಲಿಸಿದ ವಿವರಗಳು: | |
| 8 | ಪ್ರಸ್ತುತ ಪಡೆಯುತ್ತಿರುವ ಸಂಬಳ: (ಸಂಬಳ ದೃಢೀಕರಣ ಪತ್ರ ಲಗತ್ತಿಸುವುದು) | |
| 9 | ಇಲಾಖಾ ವಿಚಾರಣೆಯ ವಿವರಗಳು: | |
| 10 | ನಿಗಮದಿಂದ ಈಗಾಗಲೇ ಮನೆ ನಿರ್ಮಾಣ/ ನಿವೇಶನ/ ಫ್ಲಾಟ್/ ಕೃಷಿ ಭೂಮಿಯ ಖರೀದಿಗಾಗಿ ನಿರಾಕ್ಷೇಪಣಾ ಪತ್ರ ಪಡೆದಿರುವರೇ? ಪಡೆದಿದ್ದರೆ, ಅದರ ವಿವರಗಳು | |
| 11 | ಪ್ರಸ್ತಾವಿಕ ನಿರಾಕ್ಷೇಪಣಾ ಪತ್ರ ಪಡೆಯಲು ಉದ್ದೇಶಿಸಿರುವ ಆಸ್ತಿಯ ವಿವರ: | |
| 12 | 1. ಆಸ್ತಿ ಖರೀದಿಗೆ ಮುಂದಾಗಿದ್ದಲ್ಲಿ ತಗಲುವ ಒಟ್ಟು ವೆಚ್ಚ:<br>2. ಒಟ್ಟು ವೆಚ್ಚವನ್ನು ಭರಿಸಲು ಅದಾಯದ ಮೂಲಗಳ ವಿವರ:<br>3. ಬ್ಯಾಂಕ್ ಸಾಲ (ಸಾಲ ಮಂಜೂರಾತಿ ಪತ್ರದ ದೃಢೀಕೃತ ಪ್ರತಿಯನ್ನು ಲಗತ್ತಿಸುವುದು),ಕೈಸಾಲ,ಕೊಡುಗೆ ಹಣ,ಸಂಬಳ ಉಳಿತಾಯ, ಇತ್ಯಾದಿ: | |
| 13 | ಖರೀದಿಗಾಗಿ ಮಾಡಿಕೊಂಡ ಕರಾರಿನ ದೃಢೀಕೃತ ಪ್ರತಿಯನ್ನು ಲಗತ್ತಿಸತಕ್ಕದ್ದು. | |

ಸೂಚನೆ: ಕ್ರಮ ಸಂಖ್ಯೆ 1 ರಿಂದ 10 ರವರೆಗೆ ವಿಭಾಗಾಧಿಕಾರಿಗಳು ದೃಢೀಕರಿಸತಕ್ಕದ್ದು.

ಅರ್ಜಿದಾರರ ಸಹಿ

"ಪರಿಶೀಲಿಸಿದೆ"

ಮೇಲಾಧಿಕಾರಿಗಳು (ಸಹಿ ಮತ್ತು ಮೊಹರಿನೊಂದಿಗೆ)

ಅನುಬಂಧ-2

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

[ಸ್ಥಿರಾಸ್ತಿಗಳನ್ನು ಮಾರಾಟ ಮಾಡಲು ಪೂರ್ವಾನುಮತಿ
(ನಿರಾಕ್ಷೇಪಣಾ ಪತ್ರ) ಪಡೆಯಲು ಸಲ್ಲಿಸಬೇಕಾದ ಅರ್ಜಿಯ ನಮೂನೆ]

| | | |
|---|---|---|
| 1 | ಅರ್ಜಿದಾರರ ಹೆಸರು, ಪಿನ್: | |
| 2 | ಪದನಾಮ: | |
| 3 | ಕೆಲಸ ಮಾಡುತ್ತಿರುವ ಕಛೇರಿ: | |
| 4 | ಹುಟ್ಟಿದ ದಿನಾಂಕ: | |
| 5 | ಕೆಲಸಕ್ಕೆ ಸೇರಿದ ದಿನಾಂಕ: | |
| 6 | ನಿವೃತ್ತಿ ಹೊಂದುವ ದಿನಾಂಕ: | |
| 7 | ಕಳೆದ 3 ವರ್ಷಗಳಲ್ಲಿ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯನ್ನು ಸಲ್ಲಿಸಿದ ವಿವರಗಳು: | |
| 8 | ಪ್ರಸ್ತುತ ಪಡೆಯುತ್ತಿರುವ ಸಂಬಳ:<br>(ಸಂಬಳ ದೃಢೀಕರಣ ಪತ್ರ ಲಗತ್ತಿಸುವುದು) | |
| 9 | ಇಲಾಖಾ ವಿಚಾರಣೆಯ ವಿವರಗಳು: | |
| 10 | ಮಾರಾಟಕ್ಕಾಗಿ ಪೂರ್ವಾನುಮತಿ ಪಡೆಯಲು ಉದ್ದೇಶಿಸಿರುವ ಆಸ್ತಿಯ ವಿವರ: | |
| 11 | ಪ್ರಸ್ತುತ ಮಾರಾಟ ಮಾಡಲು ಬಯಸಿದ ಸ್ಥಿರಾಸ್ತಿಯನ್ನು ಹೊಂದಿದ ವಿಧಾನ:<br>ಸ್ಥಿರಾಸ್ತಿಯನ್ನು ಖರೀದಿಸಿದ ವರ್ಷ:<br>ಸ್ಥಿರಾಸ್ತಿಯನ್ನು ಖರೀದಿಸಿದ ಅವಧಿಯಲ್ಲಿನ ಮೌಲ್ಯ/ಬೆಲೆ: | |
| 12 | ಮಾರಾಟ ಮಾಡಲು ಬಯಸಿದ ಸ್ಥಿರಾಸ್ತಿಯ ಪ್ರಸ್ತುತ ಮೌಲ್ಯ/ಬೆಲೆ: | |
| 13 | ಪ್ರಸ್ತುತ ಮಾರಾಟ ಮಾಡಲು ಬಯಸಿದ ಸ್ಥಿರಾಸ್ತಿಯನ್ನು ಖರೀದಿಗಾಗಿ ನಿಗಮದಿಂದ ನಿರಾಕ್ಷೇಪಣಾ ಪತ್ರ ಪಡೆದಿರುವರೇ? ಪಡೆದಿದ್ದರೆ, ಅದರ ವಿವರಗಳು: | |
| 14 | ಮಾರಾಟಕ್ಕಾಗಿ ಮಾಡಿಕೊಂಡ ಕರಾರಿನ ದೃಢೀಕೃತ ಪ್ರತಿಯನ್ನು ಲಗತ್ತಿಸತಕ್ಕದ್ದು | |

ಸೂಚನೆ: ಕ್ರಮ ಸಂಖ್ಯೆ 1 ರಿಂದ 10 ರವರೆಗೆ ವಿಭಾಗಾಧಿಕಾರಿಗಳು ದೃಢೀಕರಿಸತಕ್ಕದ್ದು.

ಅರ್ಜಿದಾರರ ಸಹಿ

"ಪರಿಶೀಲಿಸಿದೆ"

ಮೇಲಾಧಿಕಾರಿಗಳು (ಸಹಿ ಮತ್ತು ಮೊಹರಿನೊಂದಿಗೆ)